ಪ್ರಬಂಧ

# ಏಕವಚನಕಾರರು



**ಲಕ್ಷ್ಮಣ ಬದಾಮಿ**

ಕಲೆ: ಸಂತೋಷ್ ಸಸಿಹಿತ್ಲು

ರಾಯಚೂರು ಜಿಲ್ಲೆ ಕಡೆಗೆ ನಾನು ಅದೇ ಮೊದಲ ಸಲ ಪ್ರಯಾಣ ಬೆಳೆಸಿದ್ದೆ. ಸಿರಿವಾರವನ್ನು ತಲುಪಿದೊಡನೆ ಬಸ್ಸಿಳಿದು, ಚಿಲ್ಲರೆ ಕೊಡಬೇಕಿದ್ದ ಕಂಡಕ್ಟರ್ ಬಳಿ ಹೋದೆ. ಅವನು ಇಬ್ಬರಿಗೆ ತಳುಕು ಹಾಕಿ ನನ್ನ ಕೈಗೆ ಹತ್ತು ರುಪಾಯಿ ಕೊಟ್ಟು, 'ಆ ಯಜಮಾನಗ ಐದು; ನೀವೈದು ರುಪೈ ತುಗೋರಿ' ಅಂದು ಬಸ್ಸಿಗೆ ರೈಟ್ ಹೇಳಿದ.

ನಾನು ಪ್ಯಾಂಟಿನ ಜೇಬಿಗೆ ಕೈ ಹಾಕಿದೆ. ಒಂದಿಷ್ಟು ಕಾಯಿನ್ ಹತ್ತಿದವು. ತೆಗೆದು ನೋಡಿದರೆ, ಎಲ್ಲ ಎರಡರ ನಾಣ್ಯಗಳಿದ್ದವು. ಆ ಯಜಮಾನನಿಗೆ ಮೂರು ಕೊಟ್ಟು ನನ್ನ ದಾರಿಗೆ ತಿರುಗುತ್ತಿದ್ದೆ. ಅವನು 'ಅಲ್ಲಪಾ... ಮೂರೇ ರುಪೈ ಕೊಟ್ಟದ್ದೆಲ್ಲ...' ಅಂದದ್ದನ್ನು ಕೇಳಿ ನಾನು ಅವಾಕ್ಕಾಗಿ ಹೋದೆ! ನಾನು ಅವನಿಗೆ ಐದು ರೂಪಾಯಿ ಕೊಡುವಲ್ಲಿ ಆರು ರುಪಾಯಿ ಕೊಟ್ಟರೂ ಮೂರೇ ಅನ್ನುತ್ತಿದ್ದಾನಲ್ಲ ಎಂಬುದಕ್ಕಲ್ಲ. ನನ್ನನ್ನು 'ಅಲ್ಲಪಾ...' ಅಂತ ಸಂಬೋಧಿಸಿದನಲ್ಲ, ಅದು ನನ್ನ ಮುಖಕ್ಕೆ ಹೊಡೆದಂತಾಗಿತ್ತು! ನಾನು ತಕ್ಕಮಟ್ಟಿಗೆ ಒಳ್ಳೆಯ ಶರಟು-ಪ್ಯಾಂಟು ಹಾಕಿಕೊಂಡು ಡೀಸೆಂಟಾಗಿಯೇ ಕಾಣುತ್ತಿದ್ದೆ. ಯಾವುದೇ ಅಬ್ಬೇಪಾರಿ ಲಕ್ಷಣಗಳು ನನ್ನಲ್ಲಿ ಇರಲಿಲ್ಲ. ಆದರೂ ಈ ಮನುಷ್ಯ ಅಲ್ಲಪಾ ಎಂದು ಕರೆದು ನನ್ನನ್ನು 'ಅಲ್ಪ'ನನ್ನಾಗಿ ಮಾಡಿಬಿಟ್ಟನಲ್ಲ! ಅನ್ನೋದು ನನಗೆ ಅತೀವ ಖೇದ ತಂದಿತು. ಸ್ವಲ್ಪ ಸಿಟ್ಟಿನಿಂದ 'ಆರು ರುಪಾಯಿ ಅದಾವ ನೋಡು' ಅಂದೆ. ಅವನು ನೋಡಿಕೊಳ್ಳುತ್ತ 'ಸರೆ ಸರೆ...' ಅಂತ ಅವನ ದಾರಿ ಹಿಡಿದನು.

ತುಂಬಾ ಹೊತ್ತು ಏನು; ತುಂಬಾ ದಿನಗಳ ಕಾಲವೂ 'ಅಲ್ಲಪಾ' ಎಂಬುದು ನನ್ನಲ್ಲಿ ಅಲೆಅಲೆಯಾಗಿ ಹೊಮ್ಮಿ ಕಾಡತೊಡಗಿತ್ತು. ನಮ್ಮ ಕಡೆಗೆ ಯಾರೇ ಅಪರಿಚಿತರನ್ನು ಈ ರೀತಿ ಏಕವಚನದಲ್ಲಿ ಸಂಬೋಧಿಸುವುದಿಲ್ಲ. ವಾಕ್ಯದ ಕೊನೆಗೆ 'ರೀ...' ಸೇರಿಸಿ ಮಾತನಾಡುತ್ತಾರೆ. ಉದಾಹರಣೆಗೆ: 'ಹೌದೇನ್ರಿ..., ಆಯಿತರೀ, ಹಂಗ್ ಆಗಲ್ರೀ...' ಅಂತ. ವಯಸ್ಸಿನಲ್ಲಿ ಹಿರಿಯರಾಗಿರುವವರು ಕಿರಿಯರನ್ನು ಮಾತ್ರ ಏಕವಚನದಲ್ಲಿ ಕರೆಯುತ್ತಾರೆ. ನನಗೆ ಏಕವಚನದಲ್ಲಿ ಹೊಕ್ಕು-ಬಳಕೆ ಮಾಡುವ ಹೊರಗಿನ ಫ್ರೆಂಡ್ಸು ಭಾಳ ಕಡಿಮೆ. ಇಂಥದ್ದರಲ್ಲಿ ಆ ಮನುಷ್ಯ ನನಗಿಂತ ವಯಸ್ಸಿನಲ್ಲಿ ಭಾಳ ದೊಡ್ಡವನೆಂದು ಕಂಡಿರಲಿಲ್ಲ. ಹೆಚ್ಚು ಕಮ್ಮಿ ನನ್ನ ಸಮ ವಯಸ್ಕನೇ. ಅಂಥವನು ಏಕ್‌ದಂ ಏಕವಚನ ಪ್ರಯೋಗ ಮಾಡುವುದೆಂದರೆ ತಳಮಳವಾಗದಿರುತ್ತದೆಯೇ? ಇದೇ ಜಿಲ್ಲೆಯಲ್ಲಿ ನಾನು ಆಮೇಲೆ ವೃತ್ತಿ ಆರಂಭಿಸಿ ತಿಂಗಳು ಕಳೆದ ಮೇಲೆಯೇ ಗೊತ್ತಾಗಿದ್ದು – ಇಲ್ಲಿ ಏಕವಚನ, ಬಹುವಚನ ಸಂಬೋಧನೆಗೆ ಅಂಥ ಮಹತ್ತರವಾದ ವ್ಯತ್ಯಾಸವನ್ನು ಈ ಮಂದಿ ಕೊಟ್ಟವರಲ್ಲವೆಂದು.